ಒಣಎಲೆಯಂತೆ ನೋಡಿದ.

ಅರೆಕ್ಷಣ ಅವಳು ನಡುಗಿಬಿಟ್ಟಳು. ನಾಚಿಕೆಯೆನ್ನಿಸಿತು. ಅದೆಷ್ಟೋ ಮಧ್ಯರಾತ್ರಿಗಳು, ಕುಡಿದು ಜೋಲಿಯಾಗಿ ಬಂದವನು ಸೇಡಿಗೆ ಬಿದ್ದವನಂತೆ ಅತಿಕ್ರಮಿಸುವಾಗಲೂ, ದೇವರೇ ಶಿವನು ಶಿವೆಯಲ್ಲಿ ಪಡೆದ ತೃಪ್ತಿ ಇವನಿಗೆ ದಕ್ಕಲಿ ಎಂದು ಪ್ರಾರ್ಥಿಸುತ್ತ ಒಡ್ಡಿಕೊಳ್ಳುತ್ತಿದ್ದ ತನ್ನ ಬಗ್ಗೆಯೇ ರೋಸಿಹೋಯಿತು. ತೃಪ್ತಿಯನ್ನು ಒಬ್ಬರು ಮತ್ತೊಬ್ಬರಿಗೆ ಕೊಡಲು ಸಾಧ್ಯವೇ? ಸಾವರಿಸಿಕೊಂಡಳು. ಅವನ ನೋಟದ ಭಾಷೆಯ ಅಂಚಲ್ಲಿ ಸ್ವತಂತ್ರದ ನಿರ್ಭೀತಿಯೊಂದು ತನಗಾಗಿ ಒದಗಲಿದೆ ಅನ್ನಿಸಿತು. ಇನ್ನು ಈ ದೇಹ ಒಡ್ಡಿಕೊಳ್ಳಬೇಕಿಲ್ಲ. ಈ ಮೊಲೆ, ತುಟಿಯೊಡ್ಡುವ ಕಂದನಿಗಾಗಿ ಕಾಯಬೇಕಿಲ್ಲ. ಯಾಕೋ ಮೊದಲ ಬಾರಿ ಅವಳು ಅವಳಿಗಾಗಿ ಯೋಚಿಸಿದಳು. ಅವನು ಏನಾದರೂ ಹೇಗಿದ್ದರೂ ಅದು ಅವನ ಜವಾಬ್ದಾರಿ. ನಾನದರ ಹೊಣೆಗಾರಳಲ್ಲ ಎಂಬ ಭಾರ ಇಳುಹಿದಂತೆ. ಕಂಬಳಿಹುಳು ಪೊರೆ ಕಳಚಿ ಚಿಟ್ಟೆಯಾಗುವ ಕ್ಷಣದ ಪುಳಕದಂತೆ, ಜೀವಕ್ಕೆ ರೆಕ್ಕೆ ಮೂಡಿದಂತೆ.

ಅಂಗಳದ ದಾಸವಾಳದಲ್ಲಿ ಚಿಟುಗುಬ್ಬಿಯೊಂದು ಕುಣಿದಾಡುತ್ತಿತ್ತು. ಓಹ್, ಎಷ್ಟೆಲ್ಲ ಬಾಕಿಯಿದೆ. ಗಿಡ–ಗಂಟಿಗಳ ಕೆಲಸ ಏನೂ ಆಗಿಲ್ಲ. ಅಡುಗೆಮನೆಯಲ್ಲಿ ಖಾರಾ ಕೂಡಿಸಿಟ್ಟಿಲ್ಲ. ಪಕ್ಕದ ಮನೆ ಯಮುನಿ, ಅದೇ ಆ ಕುಡುಕ ನಾಗರಾಜನ ಹೆಂಡತಿ, ಬಿ.ಕಾಂ ಮಾಡಿದವಳು ಹೇಳುತ್ತಿದ್ದಳು, 'ಆಂಟಿ, ನಾವು ನಾವೇ ಹೆಂಗಸರು ಸೇರಿ ಏನಾರ ಪ್ಲ್ಯಾನ್ ಮಾಡೂಣು? ಸರ್ಕಾರ ಕೊಟ್ಟ ರೊಕ್ಕ ಕೂಡಿ ಒಂದಿಷ್ಟು ಸಾವಿರ ಆಗಿದೆ'. ಅವಳಿಗೆ ಮಲೆನಾಡಿನ ಸಾಂಬಾರುಪುಡಿ, ಕಷಾಯ ಪುಡಿ, ತೊಕ್ಕು, ಹಪ್ಪಳ, ಹಲಸಿನ ಕಾಯಿ ಚಿಪ್ಸ್ ಎಲ್ಲ ನೆನಪಾಗುತ್ತಿತ್ತು. ಯಮುನಿ ಮತ್ತು ಸೇವಂತಿಯರಿಗೆ ಮಾದಲಿ, ಜೋಳದ ರೊಟ್ಟಿ, ಶ್ಯಾವಿಗಿ, ಗುಳಗಿ, ಸೌತಿಬೀಜ.... ಓಹೋಹೋ ಮುಗಿತಾಯವೇ ಇಲ್ಲದ ಸರಪಳಿ.

ಆ ಸೌದಾಗರ್ ಭಾಯಿ ಸೊಸೆ, 'ಮೈಂ ಬಹುತ್ ಅಚ್ಛೇಸೆ ಮಟಣ ಮಸಾಲಾ ಕರದೇತಿ' ಅಂತೇನೋ ಹೇಳಿದ್ದಳಂತೆ. ಏನೂ ಮಾಡಲಾಗದ್ದಕ್ಕೆ ಈ ಹೆಂಗಸರೆಲ್ಲ ಗುಡಿ ಗುಂಡಾರ, ಜ್ಯೋತಿಷ, ಮೊಬೈಲ್ ರೀಲ್ಸ್ ಅಂತ ಆಯುಷ್ಯ ಕಳೀತಿದಾರೆ. ಸದ್ಯಕ್ಕೆ ತನ್ನ ಮನೆಯ ಜಗಲಿಗೆ ಮುಂದಿನ ಕೋಣೆಗೆ ತಮ್ಮ ಚಟುವಟಿಕೆಯನ್ನು ತರುವುದು, ನಾಳೆ ರವಿವಾರ, ಸಂಜೆ ಮೂರಕ್ಕೆ ಮೀಟಿಂಗ್ ಕರೆಯೋದು. ಎಲ್ಲಾ ಹೆಂಗಸರೂ ಮನೆಗೆ ಬಂದಾಗ ಇವನಿಗೆ ಇರೋದು ಎರಡೇ ದಾರಿ. ಚಪ್ಪಲಿ ಮೆಟ್ಟಿಕೊಂಡು ಹೊರ ಹೋಗೋದು ಅಥವಾ ಬಂದವರೊಂದಿಗೆ ಗೌರವದಿಂದ ನಡೆದುಕೊಳ್ಳೋದು. ಅವಳಿಗೆ, ಒಂದು ಗಳಿಗೆ ಗಾಬರಿಯಾಯಿತು. ಕಳಚಿಕೊಳ್ಳಬೇಕೆಂದಷ್ಟೂ ಮನಸ್ಸು ಮತ್ತದೇ ಪರಿಧಿಗೇ ಲಗತ್ತಾಗುತ್ತಿದೆ. ಸಣ್ಣಗೆ ನಕ್ಕಳು. ಈ ಮನೆ ಈ ಅಂಗಳ, ಈ ದೇಹ, ಈ ಬೆಳಕು, ಈ ರಾತ್ರಿ ಎಲ್ಲವೂ ನನ್ನದೂ ಕೂಡ. ಬದುಕು ಮುಕ್ಕಾಲು ಮುಗಿದಿರಬಹುದು. ಇನ್ನು ಕಾಲು ಭಾಗವಾದರೂ ಉಳಿದಿದೆಯಲ್ಲ. ಒಂದೊಂದು ದಿನವನ್ನೂ ಚಪ್ಪರಿಸಿ ಚಪ್ಪರಿಸಿ ಸವಿಯಬೇಕೆಂಬ ಅದಮ್ಯ ಬಯಕೆಯೊಂದು ನುಗ್ಗಿ ಬಂತು. ಎದ್ದು ನಿಂತಳು. ಗಟ್ಟಿಯಾಗಿ.



'ಇನ್ನೇನು ಇವಳು ಮಣ್ಣಾಂಗಟ್ಟಿ ಹಿಂದಿಲ್ಲ ಮುಂದಿಲ್ಲ, ಹೇಳಿದ್ದಾಂಗ ಕೇಳಿ ಬಿದ್ದಿರಬೇಕಷ್ಟೇ' ಎಂದೇನೋ ಲೆಕ್ಕ ಹಾಕುತ್ತಿದ್ದ ಅವನಿಗೆ ಯಾವುದೂ ಬಗೆ ಹರಿಯಲಿಲ್ಲ. ಅವಳು ಅಳುತ್ತಿಲ್ಲ, ವ್ಯಂಗ್ಯವಿಲ್ಲ, ಧಿಮಾಕಿಲ್ಲ, ಸೋತೆ ಎಂಬ ಆ ಗಾಢ ವಿಷಾದವಿಲ್ಲ. ಅದೇ ಆಗ ಹುಟ್ಟಿದ ಕಂದನಂತೆ ಶಾಂತ ಸ್ನಿಗ್ಧವಾಗಿದ್ದಳು. ಅವನು ಬಾಯಿಬಿಟ್ಟು ನಿಂತ. ಅವಳ ಕಣ್ಣ ಪಾಪೆಗಳಲ್ಲಿ ಅಷ್ಟುದ್ದದ ಅಂವ ಸಣ್ಣಗೆ ಸಪೂರಕೆ ಕಂಡ. ಕಣ್ಣುಜ್ಜಿಕೊಂಡಳು. ಪಾಪ ಎಂಬ ಕರುಣೆಯಲ್ಲಿ ಹಗೂರ ನಕ್ಕಳು. ಆ ನಗೆಗೆ ಬೆಳಕಿನ ಬಣ್ಣವಿತ್ತು.

●